# ಪ್ರತಿ ಮುಖದ ಹಿಂದಿನ ಅ–ಪ್ರತಿಮ ಲೋಕ

ನಗರಗಳಲ್ಲಿ ನಿತ್ಯ ಅಪರಿಚಿತ ಮುಖಗಳು ಎದುರಾಗುತ್ತವೆ. ಜೋತುಬಿದ್ದ ಎಲೆಗಳಂತಿರುವ ಆ ಮುಖಗಳ ಹಿಂದೆ ಒಂದು ಅಪ್ರತಿಮಲೋಕ ಅಡಗಿರುತ್ತದೆ. ಕಾತರ, ಬೇಸರ, ನಿರೀಕ್ಷೆ, ಅವಸರ, ತವಕ, ತಲ್ಲಣಗಳಿಂದ ಕೂಡಿರುವ ಆ ಯಾವ ಮುಖದ ಹೆಸರೂ ನಮಗೆ ಗೊತ್ತಿರುವುದಿಲ್ಲ. ನಮಗೆ ಬೇಕಾದ ಹೆಸರನ್ನು ಅವಕ್ಕೆ ಕೊಡಬಹುದು. ನಗರದ ನಿಜಗುಣವೇ ಆಗಿರುವ ಅನಾಮಿಕತೆ ಅದು. ಸಣ್ಣ ಊರುಗಳಲ್ಲಿ ಇರುವ ಗುರುತು ಪರಿಚಯ ಅಲ್ಲಿಲ್ಲ. ಯಾವುದೇ ಪರಿಚಯಗಳಿಲ್ಲದ ಊರುಗಳಲ್ಲಿ ವ್ಯಕ್ತಿಗಳಿಗೆ ಅನಾಮಿಕತೆ ತಂದುಕೊಡುವ ಬಿಡುಗಡೆ, ಸುಖ, ಆತಂಕ ವಿಚಿತ್ರವಾಗಿರುತ್ತದೆ. ಅದು ಸ್ವಂತದ ಅಸ್ತಿತ್ವದಿಂದಲೂ ಮುಕ್ತಗೊಳಿಸುತ್ತದೆ. ಜೊತೆಗೆ ವ್ಯಕ್ತಿಯ ಜಾತಿ, ಧರ್ಮ, ಕಟ್ಟುಪಾಡು, ಅಪಮಾನಗಳಿಂದ ಕೂಡ. ಜನಸಂದಣಿಯಲ್ಲಿ ವೇಷಕಟ್ಟಿ ಕುಣಿದರೆ ಅದನ್ನು ಯಾರು ನೋಡಬೇಕು?

ನಮ್ಮ ಕೆಲವು ಲೇಖಕರು ತಮ್ಮ ಕೃತಿಗಳಿಂದ ಮಾಡುವ ಪ್ರಭಾವಕ್ಕಿಂತ ಹೆಚ್ಚಾಗಿ ತಮ್ಮ ಹೊರಚಹರೆಯ ಪ್ರದರ್ಶನದಲ್ಲಿ ತೊಡಗಿರುತ್ತಾರೆ. ಅವರ ಭೀಕರ ಭಾಷಣಗಳು, ಪುಸ್ತಕಗಳ ಮೇಲಿನ ಅವರ ವಿವಿಧ ಅಂಗಭಂಗಿಯ ಚಿತ್ರಗಳು ರಾಜಕಾರಣಿ, ಸಿನಿಮಾ ನಟನ ಇಮೇಜ್ ಅನ್ನು ಸೃಷ್ಟಿಸುತ್ತವೆ. ಅವರು ಸುಮ್ಮನಿರುವ ಆಸಾಮಿಗಳಲ್ಲ. ಅವರಿಗೂ ತಕ್ಷಣದ ಪ್ರಚಾರ, ಪ್ರಸಿದ್ಧಿ ಬೇಕು. ಪತ್ರಿಕೆಗಳಲ್ಲಿ ಆಗಾಗ ಕಾಣಿಸಿಕೊಳ್ಳದಿದ್ದರೆ, ಅವರ ಸಾಹಿತ್ಯದ ಬಗ್ಗೆ ಸೆಮಿನಾರುಗಳು ಆಗದಿದ್ದರೆ ಅಧಿಕಾರಸ್ಥರು ತಮ್ಮನ್ನು ಮರೆತುಬಿಡಬಹುದು, ಚಲಾವಣೆ ಕಳೆದುಕೊಳ್ಳಬಹುದು ಎಂಬ ಭಯ ಅವರಿಗೆ. ಆದರೆ, ಆ ಪ್ರಸಿದ್ಧಿಯೂ ಕ್ಷಣಿಕ.

ಶಾಶ್ವತವಾಗುವ ಭ್ರಮೆಯಲ್ಲಿ ಮನುಷ್ಯ ಎಸಗುವ ಕೆಲಸಗಳು ಹಲವು. ಅದರಲ್ಲಿ ಪ್ರಸಿದ್ಧಿಯೂ ಸೇರುತ್ತದೆ. ಸಾಹಿತಿಯ ನಿಜವಾದ ಸಂಪತ್ತಾದ ಸಂಕೋಚ, ಲಜ್ಜೆ, ಅನಾಮಿಕತೆಗಳನ್ನು ಒಲ್ಲದವರು ವೇದಿಕೆಗಳ ಮೇಲೆ ಅವಕಾಶ ಸಿಕ್ಕಾಗಲೆಲ್ಲ ಗಳಪುತ್ತಿರುತ್ತಾರೆ. ಬರೀ ಅದೇ ಆದರೆ ಅವರ ಒಳಸೆಲೆ ಬರಿದಾಗುತ್ತದೆ, ಬರಹದ ಕಸುವು ಕಮ್ಮಿಯಾಗುತ್ತದೆ, ಒಳಜಗತ್ತು ಕರಗಿಹೋಗುತ್ತದೆ.

ಈ ಅನಾಮಿಕತೆ ಸಾಮಾಜಿಕ ಜಾಲತಾಣಗಳಲ್ಲಿ ಇರುವ ಬಗೆ ಬೇರೆ ರೀತಿಯದು. ಅಲ್ಲಿರುವ ಅಮಿತ ಅಭಿವ್ಯಕ್ತಿ ಸ್ವಾತಂತ್ರ್ಯ, ನಿರ್ಭಯ ಅವಕಾಶ ಹಲಬಗೆಯ ಕೆಟ್ಟ ಕೃತ್ಯಗಳಿಗೆ ಪ್ರೇರೇಪಿಸುತ್ತದೆ. ಬೇರೆಯವರ ವ್ಯಕ್ತಿತ್ವಕ್ಕೆ ಬೇಡದ ಬಣ್ಣ ಬಳಿಯುವುದು, ನಿಂದಿಸುವುದು, ಹಳಿಯುವುದು ಅಲ್ಲಿ ಸುಲಭ. ತಮ್ಮ ಹೆಸರು ಹಾಕದೆಯೇ ಅದನ್ನು ಮಾಡಬಹುದು. ಹಾಗೆ ಮಾಡುವವರು ನೈತಿಕವಾಗಿ ಅಧಃಪತನ ಹೊಂದಿರುತ್ತಾರೆ. ಇಲ್ಲವೇ ನಿರ್ಲಜ್ಜರಾಗಿರುತ್ತಾರೆ. ಬೇರೆಯವರ ವ್ಯಕ್ತಿತ್ವವನ್ನು ಕುಂದಿಸುವುದು ಈಗ ಉದ್ದಿಮೆ, ವ್ಯಸನ, ಹವ್ಯಾಸ ಎಲ್ಲವೂ ಆಗಿದೆ; ಅದು ಹಿಡಿಯಲಾಗದ ಹುಚ್ಚು ಕುದುರೆಯೂ ಹೌದು.

ಹಲವು ರಂಗಗಳ ಪ್ರಸಿದ್ಧರ ಹೆಸರು ಆಗಾಗ ಅಲ್ಲಲ್ಲಿ ಕಾಣಿಸುತ್ತಿರುತ್ತದೆ, ನಿಜ. ಅವರ ಹೆಸರಿನೊಂದಿಗೆ ಅವರ ಕೆಲಸಗಳೇ ಕಣ್ಣಮುಂದೆ ಬರುವುದಿಲ್ಲ. ಅಂಥವರನ್ನು ಜನರು ಮರೆತೇ ಬಿಟ್ಟಿರುತ್ತಾರೆ. ಅನಾಮಿಕತೆಗೂ ಎಷ್ಟೆಲ್ಲ ಮುಖಗಳಿವೆ!

**ಸಂದೀಪ ನಾಯಕ**

